ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(33)

(CIN) : U40109KA2004SGC035177
ನಿಗಮ ಕಛೇರಿ : ನಂ. 29, ವಿಜಯನಗರ,
2ನೇ ಹಂತ, ಹಿನಕಲ್
ಮೈಸೂರು-570 017
www.cescmysore.org

ರವರ ಕಛೇರಿ
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
ಸೆಸ್ಕ್, ಆಲೂರು.
ದೂ.ಸಂ. 081702-218233
E.Mail : aeealur@gmail.com

ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಆಲೂರು/2017-18/ 1121-24 ದಿನಾಂಕ : 30.11.17

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ: 23.11.2017 ರ ಗುರುವಾರದಂದು ಶ್ರೀಮತಿ ಭಾರತಿ,ಅಧೀಕ್ಷಕ ಇಂಜಿನಿಯರ್ (ವಿ) (ಪ್ರಭಾರಿ) ಹಾಸನ ರವರ ಅಧ್ಯಕ್ಷತೆಯಲ್ಲಿ ಆಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು:

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು

1. ಶ್ರೀ ರಂಗೇಗೌಡ ಎಮ್.ಬಿ. ಸ.ಕಾ.ಇಂ.(ವಿ), ಆಲೂರು ಉಪವಿಭಾಗ
2. ಶ್ರೀ ಹರೀಶ್,ಲೆಕ್ಕಾಧಿಕಾರಿ,ಸಕಲೇಶಪುರ ವಿಭಾಗ
3. ಶ್ರೀ ತೋಟಪ್ಪ,ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
4. ಶ್ರೀಮತಿ ಬಿಂದು,ಸಹಾಯಕ ಇಂಜಿನಿಯರ್ (ತಾಂತ್ರಿಕ,), ಆಲೂರು ಉಪವಿಭಾಗ
5. ಶ್ರೀ ಅಬ್ದುಲ್, ಕಿರಿಯ ಇಂಜಿನಿಯರ್ (ವಿ), ಪಾಳ್ಯ ಶಾಖೆ.
6. ಶ್ರೀ ಮಹೇಶ್ವರಪ್ಪ, ಕಿರಿಯ ಇಂಜಿನಿಯರ್ (ವಿ), ಮಗ್ಗೆ ಶಾಖೆ.
7. ಶ್ರೀ ರಂಗೇಗೌಡ, ಹಿರಿಯ ಸಹಾಯಕರು, ಕಂದಾಯ ಶಾಖೆ,ಆಲೂರು

ಶ್ರೀ ಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ಸ್ವಾಗತಿಸುವ ಮೂಲಕ ಸಭೆಯನ್ನು, ಬೆಳಿಗ್ಗೆ 11:00 ಗಂಟೆಗೆ ಪ್ರಾರಂಭ ಮಾಡಿದರು.

---

### ಜನಸಂಪರ್ಕ ಸಭೆಯಲ್ಲಿ ದಾಖಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

1. ಶ್ರೀ ನಟರಾಜ್ ಕರವೇ ಅಧ್ಯಕ್ಷರು ಸಭೆಗೆ ಹಾಜರಾಗಿ ಮಾರ್ಗದಾಳುಗಳು ತುಂಬಾ ವರ್ಷದಿಂದ ಒಂದೇ ಕಡೆ ಕರ್ತವ್ಯ ನಿರ್ವಹಿಸುತ್ತಿದ್ದು, ಜನರ ತೊಂದರೆಗಳಿಗೆ ಸರಿಯಾಗಿ ಸ್ಪಂದಿಸದೆ ಇರುವ ಕಾರಣ ಮಾರ್ಗದಾಳುಗಳ ಸ್ಥಳ ಬದಲಾವಣೆ ಮಾಡುವಂತೆ ತಿಳಿಸಿದರು.ಹೊಸದಾಗಿ ಬಂದಿರುವ ಕಿರಿಯ ಮಾರ್ಗದಾಳುಗಳನ್ನು ಉಪಯೋಗಿಸಿಕೊಂಡು ಜಂಗಲ್ ಕ್ಲೀಯರ್ ಮಾಡುವಂತೆ ತಿಳಿಸಿದರು. ಕೇಂದ್ರ ಸರ್ಕಾರದಿಂದ ಬಂದಿರುವ ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಬಗ್ಗೆ ಸರಿಯಾದ ಮಾಹಿತಿ ನೀಡುವಂತೆ ತಿಳಿಸಿದರು.ಕೊಂಗವಳ್ಳಿಯಿಂದ ರಾಮೇಶ್ವರಕ್ಕೆ ಹೋಗುವ ವಾಹಕವು 35 ವರ್ಷವಾದರು ಬದಲಾವಣೆ ಆಗದೆ ಇರುವ ಬಗ್ಗೆ ತಿಳಿಸಿದರು.ಹಲವು ಕಡೇ ಬಾಗಿರುವ RCC ಕಂಬಗಳು ಸರಿಪಡಿಸಬೇಕೆಂದು ತಿಳಿಸಿದರು.UNIP Scheme ನಲ್ಲಿ ಐ.ಪಿ ಸೇಟ್ ಗಳಿಗೆ ಪರಿವರ್ತಕವನ್ನು ಒದಗಿಸಿ ಕೊಡುವಂತೆ ತಿಳಿಸಿದರು.
   - ಸಭೆಯ ಅಧ್ಯಕ್ಷರು ತುಂಬಾ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಾರ್ಗದಾಳುಗಳನ್ನು ವರ್ಗಾವಣೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

Scanned by CamScanner

- ಹೊಸದಾಗಿ ಬಂದಿರುವ JLM ಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಂಡು ಫೀಡರ್ ಗಳನ್ನು ಸುಸ್ಥಿಯಲ್ಲಿಡುವಂತೆ ಶಾಖಾಧಿಕಾರಿಗಳಿಗೆ ತಿಳಿಸಿದರು.
- ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಬಗ್ಗೆ ಈಗಾಗಲೇ ಎಲ್ಲಾ ಪಂಚಾಯಿತಿಗೆ ಮಾಹಿತಿಯನ್ನು ನೀಡಲಾಗಿದೆ ಎಂದು ತಿಳಿಸಿದರು.
- ಕೊಂಗವಳ್ಳಿಯಿಂದ ರಾಮೇಶ್ವರಕ್ಕೆ ಹೋಗುವ ವಾಹಕವನ್ನು ಬದಲಾವಣೆ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದೆಂದು ತಿಳಿಸಿದರು.
- ಬಾಗಿರುವ ಕಂಬಗಳನ್ನು ಸರಿಪಡಿಸಲು ಎಲ್ಲಾ ಶಾಖಾಧಿಕಾರಿಗಳಿಗೂ ತಿಳಿಸಲಾಯಿತು.
- UNIP ಯೋಜನೆಯಡಿ ಸಕ್ರಮಗೊಂಡಿರುವ ಐ.ಪಿ ಸ್ಥಾವರಗಳಿಗೆ ಜೇಷ್ಠತೆಯ ಆಧಾರದ ಮೇಲೆ ಪರಿವರ್ತಕವನ್ನು ಅಳವಡಿಸಲಾಗುವುದು ಹಾಗೂ ಅಕ್ರಮ ಐ.ಪಿ ಸ್ಥಾವರಗಳನ್ನು ನಿಯಮಾನುಸಾರ ಸಕ್ರಮಗೊಳಿಸಿಕೊಳ್ಳಲು ಸಭೆಗೆ ತಿಳಿಸಿದರು.

2. ಶ್ರೀ ಶಾಂತಕೃಷ್ಣ ಬಿಜ್ಜನಹಳ್ಳಿ,ಗ್ರಾಮದವರು ಬಿಜ್ಜನಹಳ್ಳಿಯಿಂದ ಕಣದಹಳ್ಳಿಗೆ ಹೋಗುವ ವಿದ್ಯುತ್ ಮಾರ್ಗದ ವಾಹಕವು ಮರಗಳ ಮಧ್ಯದಲ್ಲಿ ಹಾದುಹೋಗಿದ್ದು ಪದೇ ಪದೇ ತುಂಡಾಗಿ ಬೀಳುತ್ತಿದ್ದು. ಹಿಂದೊಮ್ಮೆ ಹಸುವು ಮೃತಪಟ್ಟಿರುತ್ತದೆ.ಆದ್ದರಿಂದ ವಾಹಕವನ್ನು ಬೇರೆ ಕಡೆಗೆ ಸ್ಥಳಾಂತರಿಸಬೇಕೆಂದು ಕೋರಿದರು.
   ಸಭೆಯ ಅಧ್ಯಕ್ಷರು ಪಾಳ್ಯ ಶಾಖಾಧಿಕಾರಿಗಳಿಗೆ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.
3. ಅಣ್ಣೇಗೌಡ ಬಿನ್ ಸುಬ್ಬೇಗೌಡ ಬಲ್ಲೂರ್ ಪುರ, ರವರ RR NO:- 41 ಮೀಟರ್ ಅಧಿಕ ಬಿಲ್ ಬರುತ್ತಿದ್ದು ಶಾಖಾಧಿಕಾರಿಗಳ ಗಮನಕ್ಕೂ ತಂದರು ಯಾವುದೇ ಕ್ರಮಕೈಗೊಳ್ಳದ ಬಗ್ಗೆ ವಿಷಾದ ವ್ಯಕ್ತಪಡಿಸಿದರು ಹಾಗೂ ಮಾಪಕದ ಸಮಸ್ಯೆಯನ್ನು ಬಗೆಹರಿಸಲು ಸಭೆಯಲ್ಲಿ ಕೇಳಿಕೊಂಡರು.
   ಸಭೆಯ ಅಧ್ಯಕ್ಷರು ಮಗ್ಗೆ ಶಾಖಾಧಿಕಾರಿಗಳಿಗೆ ಮಾಪಕವನ್ನು ಪರಿಕ್ಷೀಸಲು ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಿದರು.
4. ಶ್ರೀ ಪೂರ್ಣಕುಮಾರ್ ಹೊಸಮಠ ಗ್ರಾಮದಲ್ಲಿ ವಾಹಕಗಳು ಜೋತು ಬಿದ್ದಿದ್ದು ಅದರ ಕೆಳಗೆ ಜನರು ಹಾಗೂ ಆನೆಗಳು ಹೆಚ್ಚು ಓಡಾಡುವ ಜಾಗವಾದ್ದರಿಂದ ಅಪಘಾತ ಸಂಭವಿಸುವ ಸಾಧ್ಯತೆ ಇದ್ದು. ಶೀಘ್ರವಾಗಿ ಸರಿಪಡಿಸಿಕೊಡಬೇಕೆಂದು ಕೇಳಿಕೊಂಡರು.
   ಸಭೆಯ ಅಧ್ಯಕ್ಷರು ಆನೆ ಕಾರಿಡಾರ್ ಯೋಜನೆಯಡಿ ಮಧ್ಯಂತರ ಕಂಬಗಳನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಈಗಾಗಲೇ ಸಲ್ಲಿಸಲಾಗಿದ್ದು ಮಂಜೂರಾತಿ ಸಿಕ್ಕಿದ ನಂತರ ಕ್ರಮವಹಿಸಲಾಗುವುದು ಎಂದು ತಿಳಿಸಿದರು.
5. ವಿದ್ಯುತ್ ಗುತ್ತಿಗೆದಾರರ ಸಂಘ,ಆಲೂರುರವರು ಆಲೂರು ಉಪವಿಭಾಗದ ಮಾರ್ಗದಾಳುಗಳು ಒಂದೆಕಡೆ ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದು. ಪ್ರಭಾವಿಗಳಂತೆ ವರ್ತಿಸುತ್ತಿದ್ದಾರೆ ಹಾಗೂ ಖಾಸಗಿ ವಿದ್ಯುತ್ ಕಾಮಗಾರಿಗಳನ್ನು ಸ್ವತಃ ನಿರ್ವಹಿಸುತ್ತಿದ್ದು ವಿದ್ಯುತ್ ಗುತ್ತಿಗೆದಾರರಿಗೆ ತೊಂದರೆ ಹಾಗೂ ನಷ್ಟವಾಗುತ್ತಿದೆ ಎಂದು ತಿಳಿಸಿದರು.ಅವರುಗಳನ್ನು ಬೇರೆಡೆಗೆ ವರ್ಗಾವಣೆ ಮಾಡಿ ಸಾರ್ವಜನಿಕರ ಹಿತವನ್ನು ಕಾಪಾಡಬೇಕೆಂದು ಅರ್ಜಿ ಸಲ್ಲಿಸಿದರು.
   ಸಭೆಯ ಅಧ್ಯಕ್ಷರು ಹಲವು ವರ್ಷಗಳಿಂದ ಒಂದೆಕಡೆ ಕೆಲಸ ನಿರ್ವಹಿಸುತ್ತಿರುವ ಮಾರ್ಗದಾಳುಗಳನ್ನು ವರ್ಗಾವಣೆ ಮಾಡಲು ಪ್ರಸ್ತಾವನೆ ಸಲ್ಲಿಸುವಂತೆ ಸಭೆಗೆ ಸೂಚಿಸಿದರು.
6. ನಾಗರಾಜ್ ಹುಲ್ಲಹಳ್ಳಿ ಗುತ್ತಿಗೆದಾರರು ಹಾಸನ ಮತ್ತು ಸಕಲೇಶಪುರ ವಿಭಾಗ ಕಛೇರಿ ಇಬ್ಭಾಗವಾದಾಗ ಬಾಕಿ ಉಳಿದಿರುವ ಎಲ್.ಸಿ. ಬಿಲ್ ಗಳು ಇನ್ನು ಪಾಸಾಗದೆ ಇರುವ ಬಗ್ಗೆ ತಿಳಿಸಿದರು.
   ಸಭೆಯ ಅಧ್ಯಕ್ಷರು ಲೆಕ್ಕಾಧಿಕಾರಿ ಸಕಲೇಶಪುರ ವಿಭಾಗೀಯ ಕಛೇರಿ ಇವರಿಗೆ ಬಿಲ್ ಪಾಸ್ ಮಾಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.
7. ರಾಘವೇಂದ್ರ ಪ್ರೆಸ್ ರಿಪೋರ್ಟರ್ ಆಲೂರುರವರು ಜನಸಂಪರ್ಕ ಸಭೆಯನ್ನು ಶಾಮಿಯಾನ ಹಾಕಿ ಸಭೆ ಮಾಡಲು ಹೇಳಿದರು ಹಾಗೂ ಆಲೂರಿನಲ್ಲಿ ಬುಧವಾರ ಸಂತೆ ಇರುವುದರಿಂದ ಆ ದಿನವೇ ಜನಸಂಪರ್ಕ ಸಭೆ ನಡೆಸಲು ತಿಳಿಸಿದರು.ಆಲೂರು ಶಾಖೆಯ ಕೊಡಗೀಹಳ್ಳಿ ಪರಿವರ್ತಕ ವಿಫಲಗೊಂಡಿದ್ದು ಬದಲಾಯಿಸುವಂತೆ ತಿಳಿಸಿದರು.ಆಲೂರಿನ ತುಳಸಮ್ಮ ಮನೆಯ

Scanned by CamScanner

ಹತ್ತಿರ ಕಬ್ಬಿಣದ ಕಂಬ ಬಾಗಿದ್ದು ಯಾವ ಸಮಯದಲ್ಲಾದರು ಬಿದ್ದು ಹೋಗುವ ಸಂಭವವಿದ್ದು ಅದನ್ನು ತುರ್ತಾಗಿ ಸರಿಪಡಿಸುವಂತೆ ತಿಳಿಸಿದರು.

ಸಭೆಯ ಅಧ್ಯಕ್ಷರು ಜನಸಂಪರ್ಕ ಸಭೆಯನ್ನು ಶಾಮಿಯಾನ ಹಾಕಿ ಬುಧವಾರ ನಡೆಸಲು ಸಭೆಗೆ ಸೂಚಿಸಿದರು. ಕೊಡಗೀಹಳ್ಳಿ ಪರಿವರ್ತಕವನ್ನು ಈಗಾಗಲೇ ಬದಲಾಯಿಸಲಾಗಿದೆ.ಎಂದು ತಿಳಿಸಿದರು.ಹಾಗೂ ತುಳಸಮ್ಮ ಮನೆಯ ಹತ್ತಿರ ಬಾಗಿರುವ ಕಬ್ಬಿಣದ ಕಂಬವನ್ನು ಬದಲಿಸುವಂತೆ ಆಲೂರು ಶಾಖಾಧಿಕಾರಿಗಳಿಗೆ ಸೂಚಿಸಿದರು.

8. ಶ್ರೀ ಮಹೇಶ್ ಮಲ್ಲಾಪುರ ರವರು ಮಲ್ಲಾಪುರ ಗ್ರಾಮದಲ್ಲಿ ಪರಿವರ್ತಕ ವಿಫಲಗೊಂಡಿದ್ದು.ಕುಡಿಯುವ ನೀರು ಹಾಗೂ ವಿದ್ಯುತ್ ಸರಬರಾಜು ಇಲ್ಲದೆ ತುಂಬಾ ತೊಂದರೆ ಆಗುತ್ತಿರುವ ಬಗ್ಗೆ ಸಭೆಗೆ ಸೂಚಿಸಿದರು.

   ಮಗ್ಗೆ ಶಾಖಾಧಿಕಾರಿಗಳಿಗೆ ಸಭೆಯ ಅಧ್ಯಕ್ಷರು ಪರಿವರ್ತಕವನ್ನು ಬದಲಾಯಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ತಿಳಿಸಿದರು.

ಸಭೆಯ ಅಧ್ಯಕ್ಷರು ಉಪವಿಭಾಗದ ಪ್ರಗತಿಯಲ್ಲಿರುವ IPDS, ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ವಿದ್ಯುದೀಕರಣ ಯೋಜನೆ,ಗಂಗಾಕಲ್ಯಾಣ ಮತ್ತು UNIP ಯ ಪ್ರಗತಿಯ ಬಗ್ಗೆ ಚರ್ಚಿಸಿದರು.

ಸಭೆಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರುಗಳನ್ನು,ವಂಧಿಸುವ ಮೂಲಕ ಸಭೆಯನ್ನು, ಮಧ್ಯಾಹ್ನ 2 :00 ಗಂಟೆಗೆ ಮುಕ್ತಾಯಗೊಳಿಸಲಾಯಿತು

ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ವಿ)
ಕಾ ಮತ್ತು ಪಾ ಉಪ-ವಿಭಾಗ,ಸೆಸ್ಕ್, ಆಲೂರು.

ಪ್ರತಿಗಳನ್ನು ಗೌರವಪೂರ್ವಕವಾಗಿ:

1..ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ,ಚಾ.ವಿ.ಸ.ನಿ.ನಿ., ಹಾಸನರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2.ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಲೆಕ್ಕಾಧಿಕಾರಿ ,,ಸಕಲೇಶಪುರ ವಿಭಾಗ
4. ಲೆಕ್ಕಾಧಿಕಾರಿ (ಆಂ.ಪ),ಸಕಲೇಶಪುರ ವಿಭಾಗ
5..ಕಛೇರಿ ಪ್ರತಿ.

Scanned by CamScanner